Akashvani: Bangalore
National Bulletin In Kannada
17.11.2025 : 13.10hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

17.11.2025 : 13.10hrs

*******

**ಮುಖ್ಯಾಂಶಗಳು :**

1. ಸೌದಿ ಅರೆಬೀಯಾದ ಮದೀನಾ ಬಳಿ ಬಸ್ ದುರಂತ ; ಹಲವು ಭಾರತೀಯ ಉಮ್ರಾ ಯಾತ್ರಿಕರ ಸಾವು ; ಪ್ರಧಾನಿ ಸಂತಾಪ
2. ಅಮೆರಿಕದಿಂದ ಎಲ್‌ಪಿಜಿ ಆಮದಿಗೆ ಭಾರತೀಯ ಸಾರ್ವಜನಿಕ ವಲಯ ತೈಲ ಕಂಪನಿಗಳಿಂದ ೧ ವರ್ಷದ ಒಪ್ಪಂದ
3. ಫರಿದಾಬಾದ್‌ನಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಉತ್ತರ ವಲಯ ಮಂಡಳಿ ಸಭೆ ಪ್ರಗತಿಯಲ್ಲಿ
4. ಫಿಡೆ ಚೆಸ್ ವಿಶ್ವಕಪ್ ; ಕ್ವಾರ್ಟರ್ ಫೈನಲ್‌ನಲ್ಲಿಂದು ಭಾರತದ ಅರ್ಜುನ್ ಎರಿಗೈಸಿ ಸ್ಪರ್ಧೆ

*******

ಇಂದು ಬೆಳಗಿನ ಜಾವ ಸೌದಿ ಅರೇಬಿಯಾದ ಮೆಕ್ಕಾದಿಂದ ಮದೀನಾಕ್ಕೆ ತೆರಳುತ್ತಿದ್ದ ಪ್ರಯಾಣಿಕರ ಬಸ್, ಡಿಸೀಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಹಲವು ಭಾರತೀಯ ಉಮ್ರಾ ಯಾತ್ರಿಕರು ಸಾವನ್ನಪ್ಪಿರುವ ಕುರಿತು ವರದಿಯಾಗಿದೆ. ಪ್ರಾಥಮಿಕ ವರದಿಗಳ ಪ್ರಕಾರ ಈ ಘಟನೆ ಭಾರತೀಯ ಕಾಲಮಾನ ಬೆಳಗಿನ ಜಾವ ೧.೩೦ರ ಸುಮಾರಿಗೆ ಮುಫ್ರಿಹತ್ ಎಂದು ಗುರುತಿಸಲಾದ ಸ್ಥಳದಲ್ಲಿ ಸಂಭವಿಸಿದೆ. ಮೃತರಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ. ಯಾತ್ರಾರ್ಥಿಗಳ ಗುಂಪು ತಮ್ಮ ಧಾರ್ಮಿಕ ವಿಧಿಗಳನ್ನು ಪೂರ್ಣಗೊಳಿಸಿ ಮೆಕ್ಕಾದಿಂದ ಮದೀನಾಕ್ಕೆ ಹಿಂತಿರುಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಪ್ರಧಾನಿ ನರೇಂದ್ರ ಮೋದಿ ಘಟನೆ ಕುರಿತು ದುಃಖ ವ್ಯಕ್ತಪಡಿಸಿದ್ದು, ಮೃತಪಟ್ಟವರಿಗೆ ಸಂತಾಪ ಸೂಚಿಸಿ, ಗಾಯಗೊಂಡವರೆಲ್ಲರ ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದಾರೆ. ಘಟನೆ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ದುಃಖ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು,

ರಿಯಾದ್‌ನಲ್ಲಿರುವ ರಾಯಭಾರಿ ಕಚೇರಿ ಮತ್ತು ಝಡ್ಡಾದಲ್ಲಿರುವ ಧೂತವಾಸ ಕಚೇರಿ ಈ ಅಪಘಾತದಿಂದ ಸಂತ್ರಸ್ತರಾದ ಭಾರತೀಯ ಪ್ರಜೆಗಳು ಮತ್ತು ಕಟುಂಬಗಳಿಗೆ ಸಂಪೂರ್ಣ ಬೆಂಬಲ ನೀಡುತ್ತಿದೆ ಎಂದು ತಿಳಿಸಿದ್ದಾರೆ. ಸಚಿವರು ಮೃತರಿಗೆ ಸಂತಾಪ ಸೂಚಿಸಿದ್ದು, ಗಾಯಗೊಂಡವರು ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದಾರೆ. ಝಡ್ಡಾದ ಭಾರತೀಯ ದೂತವಾಸ ಕಚೇರಿ ಸಹಾಯವಾಣಿ - ೮೦೦೨೪೪೦೦೦೩, ೦೧೨೨೬೧೪೦೯೩ ಬಿಡುಗಡೆ ಮಾಡಿದ್ದು, ಅದರ ಆವರಣದಲ್ಲಿ ದಿನದ ೨೪ ಗಂಟೆ ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿ ಸ್ಥಾಪಿಸಿದೆ.

*******

ಭಾರತೀಯ ಸಾರ್ವಜನಿಕ ವಲಯದ ತೈಲ ಕಂಪನಿಗಳು ಅಮೆರಿಕದಿಂದ ದ್ರವೀಕೃತ ಪೆಟ್ರೋಲಿಯಂ ಅನಿಲ-ಎಲ್‌ಪಿಜಿ ಆಮದು ಮಾಡಿಕೊಳ್ಳಲು ಒಂದು ವರ್ಷದ ಒಪ್ಪಂದಕ್ಕೆ ಸಹಿ ಹಾಕಿವೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಕಂಪನಿಗಳು ವರ್ಷಕ್ಕೆ ಸುಮಾರು ೨.೨ ಮಿಲಿಯನ್ ಟನ್ ಎಲ್‌ಪಿಜಿ ಅನ್ನು ಆಮದು ಮಾಡಿಕೊಳ್ಳುತ್ತವೆ, ಇದನ್ನು ಅಮೇರಿಕಾದ ಗಲ್ಫ್ ಕರಾವಳಿಯಿಂದ ಪಡೆಯಲಾಗುವುದು. ನಾಗರಿಕರಿಗೆ ಸುರಕ್ಷಿತ, ಕೈಗೆಟುಕುವ ಎಲ್‌ಪಿಜಿ ಅನಿಲ ಒದಗಿಸಲು ಸರ್ಕಾರವು ತನ್ನ ಎಲ್‌ಪಿಜಿ ಮೂಲವನ್ನು ವೈವಿಧ್ಯಗೊಳಿಸುತ್ತಿದೆ ಎಂದು ಹೇಳಿದರು. ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಅಧಿಕಾರಿಗಳ ತಂಡವು ಕಳೆದ ಕೆಲವು ತಿಂಗಳುಗಳಿಂದ ಅಮೇರಿಕಾಗೆ ಭೇಟಿ ನೀಡಿ ಪ್ರಮುಖ ಅಮೇರಿಕಾ ಉತ್ಪಾದಕರೊಂದಿಗೆ ಚರ್ಚೆಯಲ್ಲಿ ತೊಡಗಿದೆ ಎಂದು ಮಾಹಿತಿ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತೀಯ ಪಿಎಸ್‌ಯು ತೈಲ ಕಂಪನಿಗಳು ದೇಶದ ಜನರಿಗೆ ಕಡಿಮೆ ಜಾಗತಿಕ ಬೆಲೆಯಲ್ಲಿ ಎಲ್‌ಪಿಜಿ ಒದಗಿಸುತ್ತಿವೆ ಎಂದು ಸಚಿವರು ಒತ್ತಿ ಹೇಳಿದರು. ಕಳೆದ ವರ್ಷ ಜಾಗತಿಕ ಬೆಲೆಗಳು ಶೇಕಡಾ ೬೦ ಕ್ಕಿಂತ ಹೆಚ್ಚು ಏರಿದ್ದರೂ, ಪ್ರಧಾನಿ ಅವರ ಉಜ್ವಲ ಯೋಜನೆಯ ಮೂಲಕ ಗ್ರಾಹಕರು ಕೇವಲ ೫೦೦ ರಿಂದ ೫೫೦ ರೂಪಾಯಿಗಳಿಗೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಂಡರು, ಆದರೆ ಸಿಲಿಂಡರ್‌ನ ನಿಜವಾದ ಬೆಲೆ ಒಂದು ಸಾವಿರದ ನೂರು ರೂಪಾಯಿಗಳಿಗಿಂತ ಹೆಚ್ಚಿತ್ತು ಎಂದು ಹೇಳಿದರು. ಅಂತಾರಾಷ್ಟ್ರೀಯ ಎಲ್‌ಪಿಜಿ ಬೆಲೆ ಏರಿಕೆಯಿಂದ ದೇಶದ ಮಹಿಳೆಯರು ಹೊರೆ

ಅನುಭವಿಸದಂತೆ ನೋಡಿಕೊಳ್ಳಲು ಭಾರತ ಸರ್ಕಾರ ಕಳೆದ ವರ್ಷ ೪೦ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ವೆಚ್ಚ ಮಾಡಿದೆ ಎಂದು ತಿಳಿಸಿದ್ದಾರೆ

*********

ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಹರಿಯಾಣದ ಫರಿದಾಬಾದ್‌ನಲ್ಲಿ ಇಂದು ಉತ್ತರ ವಲಯ ಮಂಡಳಿಯ ೩೨ನೇ ಸಭೆ ಪ್ರಗತಿಯಲ್ಲಿದೆ. ಸಭೆಯಲ್ಲಿ ಹರಿಯಾಣ, ಹಿಮಾಚಲಪ್ರದೇಶ, ಪಂಜಾಬ್, ರಾಜಸ್ಥಾನ್, ದೆಹಲಿ, ಜಮ್ಮು-ಕಾಶ್ಮೀರ, ಲಡಾಕ್ ಮತ್ತು ಚಂಡಿಗಢ ಸೇರಿದಂತೆ ಉತ್ತರವಲಯ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್‌ಗಳು ಮತ್ತಿತರ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದಾರೆ. ಸಭೆಯಲ್ಲಿ ದೆಹಲಿ ಕೆಂಪುಕೋಟೆ ಬಳಿ ಸಂಭವಿಸಿದ ಕಾರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಮೃತಪಟ್ಟವರಿಗೆ ಮೌನಾಚರಣೆ ಮೂಲಕ ಗೌರವ ನಮನ ಸಲ್ಲಿಸಲಾಯಿತು. ಪ್ರಾದೇಶಿಕ ಮತ್ತು ರಾಷ್ಟ್ರೀಯ ವಿಷಯಗಳನ್ನು ಚರ್ಚಿಸಲು ಈ ಸಭೆ ಉತ್ತರವಲಯದ ಸದಸ್ಯ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಟ್ಟು ಗೂಡಿಸುತ್ತದೆ. ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಹಕಾರ ಸಂವಾದಕ್ಕೆ ಒಂದು ರಚನಾತ್ಮಕ ವೇದಿಕೆಯನ್ನು ಈ ಸಭೆ ಒದಗಿಸುತ್ತದೆ. ರಾಜ್ಯಗಳ ಪುನರ್ ವಿಂಗಡನಾ ಕಾಯ್ದೆ ೧೯೫೬ರ ಅಡಿಯಲ್ಲಿ ರಚಿಸಲಾದ ವಲಯ ಮಂಡಳಿಗಳು ಹಲವು ರಾಜ್ಯಗಳನ್ನು ಒಳಗೊಂಡ ವಿಷಯಗಳನ್ನು ಪರಿಹರಿಸಲು ಸಲಹಾ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುತ್ತವೆ. ಕಳೆದ ೧೧ ವರ್ಷಗಳಲ್ಲಿ ಇಂತಹ ೬೩ ಸಭೆಗಳನ್ನು ನಡೆಸಲಾಗಿದೆ.

*******

ಬಿಹಾರದಲ್ಲಿ ಎನ್‌ಡಿಎ ನೇತೃತ್ವದ ನೂತನ ಸರ್ಕಾರದ ರಚನೆಗೆ ಸಂಬಂಧಿಸಿದ ರಾಜಕೀಯ ಚಟುವಟಿಕೆಗಳು ತೀವ್ರಗೊಂಡಿವೆ. ಜೆಡಿಯುನ ಹೊಸದಾಗಿ ಚುನಾಯಿತ ೮೫ ಶಾಸಕರು ಪಾಟ್ನಾದಲ್ಲಿಂದು ನಡೆಯಲಿರುವ ಜೆಡಿಯು ಶಾಸಕಾಂಗ ಪಕ್ಷದ ಸಭೆಯಲ್ಲಿ ನಿತೇಶ್ ಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆ ಮಾಡುವ ನಿರೀಕ್ಷೆಯಿದೆ. ಬಿಜೆಪಿಯ ಶಾಸಕಾಂಗ ಪಕ್ಷದ ಸಭೆ ಕೂಡ ಇಂದು ನಡೆಯುವ ನಿರೀಕ್ಷೆಯಿದೆ. ಚುನಾಯಿತ ಎನ್‌ಡಿಎ ಪಕ್ಷಗಳು ತಮ್ಮ ಶಾಸಕಾಂಗ ಪಕ್ಷದ ನಾಯಕರನ್ನು ಪ್ರತ್ಯೇಕ ಸಭೆಗಳಲ್ಲಿ ಆಯ್ಕೆ ಮಾಡಿದ ನಂತರ ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಲು

ಹೊಸದಾಗಿ ಆಯ್ಕೆಯಾದ ಎಲ್ಲ ೨೦೨ ಶಾಸಕರ ಜಂಟಿ ಸಭೆಯನ್ನು ನಡೆಸಲಾಗುವುದು. ನಂತರ ಸರ್ಕಾರ ರಚಿಸುವ ಹಕ್ಕು ಮತ್ತು ಶಾಸಕ ಬೆಂಬಲ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಲಾಗುತ್ತದೆ.

*******

ಭಾರತದಲ್ಲಿ ಕಾರ್ಯನಿರತ ಸಂಶೋಧನಾ ಸಂಸ್ಥೆಗಳು ಮತ್ತು ಪ್ರಯೋಗಾಲಯಗಳು ಸಮನ್ವಯದ ಮೂಲಕ ಕಾರ್ಯ ನಿರ್ವಹಿಸುವ ಜವಾಬ್ದಾರಿಯನ್ನು ಸರ್ಕಾರ ನೀಡಿದ್ದು, ಅದರಂತೆ ಸಿಎಸ್ಐಆರ್‌ನ ಎಲ್ಲಾ ಪ್ರಯೋಗಾಲಯಗಳು ಇಸ್ರೋ ಹಾಗೂ ಅನ್ಯ ಖಾಸಗಿ ಕೈಗಾರಿಕೆಗಳೊಂದಿಗೆ ಕೈಜೋಡಿಸಿ ಸಮನ್ವಯದ ಯೋಜನೆ ರೂಪಿಸಿಕೊಂಡಿದೆ ಎಂದು ಸಿಎಸ್ಐಆರ್ ಮಹಾ ನಿರ್ದೇಶಕ ಹಾಗೂ ಬಿಎಸ್ಐಆರ್ ಕಾರ್ಯದರ್ಶಿ ಡಾ. ಎನ್. ಕಲೈಸೆಲ್ವಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿಂದು ನಡೆದ ಸಿಎಸ್ಐಆರ್ ಇಸ್ರೋ ಸ್ಪೇಸ್‌ಮೀಟ್ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು. ಬಳಿಕ ಮಾತನಾಡಿದ ಇಸ್ರೋ ಅಧ್ಯಕ್ಷ ವಿ. ನಾರಾಯಣನ್, ಇಸ್ರೋ ಸಂಸ್ಥೆ ೧೧ ವಿಶ್ವ ದಾಖಲೆಗಳನ್ನು ದಾಖಲಿಸಿವೆ. ಅನ್ಯ ದೇಶಗಳು ಭಾರತಕ್ಕೆ ತಂತ್ರಜ್ಞಾನ ನಿರಾಕರಿಸಿದಾಗ ದೇಶೀಯವಾಗಿ ಅತಿಕ್ಲಿಷ್ಟ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ ಎಂದು ಹೇಳಿದರು. ಗಗನಯಾನಿ ಪ್ರಶಾಂತ್ ನಾಯರ್ ಮಾತನಾಡಿ, ಒಬ್ಬ ಗಗನಯಾನಿ ಕೇವಲ ವಿಮಾನ ಚಾಲಕನಾಗದೇ ಅವನು ತಂತ್ರಜ್ಞನೂ, ಶುಶ್ರೂಷಕನೂ, ಮಾನಸಿಕ ತಜ್ಞನೂ ಹಾಗೂ ಛಾಯಾಗ್ರಾಹಕನೂ ಹೀಗೆ ವಿವಿಧ ಕೌಶಲ್ಯಗಳನ್ನು ಕರಗತಗೊಳಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು. ೪೧ ವರ್ಷಗಳ ಹಿಂದೆ ರಷ್ಯಾ ರಾಕೇಟ್‌ನೊಂದಿಗೆ ಪ್ರಯಾಣಿಸಿದ ಗಗನಯಾನಿ ರಾಕೇಶ್ ಶರ್ಮ ಮಾತನಾಡಿ, ಬರುವ ವರ್ಷಗಳಲ್ಲಿ ವಿವಿಧ ರಾಷ್ಟ್ರಗಳು ಚಂದ್ರ ಮತ್ತು ಮಂಗಳ ಗ್ರಹದಲ್ಲಿ ವಾಸ ಮಾಡುವ ಸಾಧ್ಯತೆಯಿದೆ ಎಂದು ತಿಳಿಸಿದರು.

*******

ಸೈಮನ್ ಆಯೋಗ ಸೇರಿದಂತೆ ಬ್ರಿಟಿಷ್ ಸರ್ಕಾರದ ದುರಾಡಳಿತದ ವಿರುದ್ಧ ಧ್ವನಿ ಎತ್ತಿದ್ದ ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತ್ ರಾಯ್ ಹುತಾತ್ಮರಾದ ದಿನವಾದ ಇಂದು ಅವರಿಗೆ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಗೌರವ ನಮನ ಸಲ್ಲಿಸಿದ್ದಾರೆ. ಭಾರತೀಯ

ಸ್ವಾತಂತ್ರ್ಯ ಚಳುವಳಿಯಲ್ಲಿ ಲಾಲಾ ಲಜಪತ್ ರಾಯ್ ಅವರ ಕ್ರಾಂತಿಕಾರಿ ವಿಚಾರಗಳು ಮತ್ತು ಬಡವರು, ಕೃಷಿಕರು ಮತ್ತು ಯುವಕರನ್ನು ಸಂಘಟಿತರಾಗಲು ಪ್ರೇರೇಪಿಸಿದ ಅವರ ಪರಿಯನ್ನು ಸಚಿವರು ಸ್ಮರಿಸಿದರು.

*******

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಇಂದು ಬೆಳಿಗ್ಗೆ ಬ್ರೆಜಿಲ್‌ನ ಬೆಲೆಮ್‌ಗೆ ಆಗಮಿಸಿದ್ದು, ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತ ಸಮಾವೇಶ ಯುಎನ್‌ಎಫ್‌ಸಿಸಿಸಿ-ಕಾಪ್-೩೦ರಲ್ಲಿ ಭಾಗವಹಿಸಲಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಮುಂದಿನ ಕೆಲವು ದಿನಗಳಲ್ಲಿ ಹವಾಮಾನ ಬದಲಾವಣೆ ಮಾತುಕತೆಗಳಲ್ಲಿ ಭಾಗವಹಿಸುವುದಾಗಿ ಮತ್ತು ಹೊಂದಾಣಿಕೆ, ಹವಾಮಾನ ಹಣಕಾಸು ಮತ್ತು ಇತರ ನಿರ್ಣಾಯಕ ವಿಷಯಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಭಾರತದ ದೃಷ್ಟಿಕೋನವನ್ನು ಮುಂದಿಡುವುದಾಗಿ ಹೇಳಿದ್ದಾರೆ.

*******

ದುಬೈ ಏರ್ ಶೋ ೨೦೨೫ ಇಂದಿನಿಂದ ಯುನೈಟೆಡ್ ಅರಬ್ ಎಮಿರೇಟ್ಸ್ -ಯುಎಇ ಯಲ್ಲಿ ಆರಂಭವಾಗಲಿದೆ. ಎರಡು ದಿನಗಳ ಈ ಕಾರ್ಯಕ್ರಮದಲ್ಲಿ ಭಾರತ ತನ್ನ ರಕ್ಷಣಾ ಸಾಮರ್ಥ್ಯವನ್ನು ಪ್ರದರ್ಶಿಸಲಿದೆ. ಭಾರತೀಯ ವಾಯುಪಡೆಯು ಸೂರ್ಯಕಿರಣ್ ಏರೋಬ್ಯಾಟಿಕ್ ತಂಡ ಮತ್ತು ಲಘು ಯುದ್ಧ ವಿಮಾನ ತೇಜಸ್‌ನೊಂದಿಗೆ ಏರ್ ಶೋನಲ್ಲಿ ಭಾಗವಹಿಸಲಿದೆ. ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಭಾರತೀಯ ನಿಯೋಗವನ್ನು ಮುನ್ನಡೆಸಲಿದ್ದಾರೆ. ಭೇಟಿಯ ಸಮಯದಲ್ಲಿ, ಸಚಿವ ಸಂಜಯ್ ಸೇಠ್ ತಮ್ಮ ಯುಎಇ ಸಚಿವರೊಂದಿಗೆ ದ್ವಿಪಕ್ಷೀಯ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಭಾರತದಲ್ಲಿ ರಕ್ಷಣಾ ತಂತ್ರಜ್ಞಾನ ಮತ್ತು ಉತ್ಪಾದನೆಯಲ್ಲಿ ಸಹಕಾರವನ್ನು ಹೆಚ್ಚಿಸಲು ಅವರು ಭಾರತ, ಯುಎಇ, ಆಸ್ಟ್ರೇಲಿಯಾ, ಅಮೆರಿಕಾ, ಬ್ರೆಜಿಲ್, ಬ್ರಿಟನ್ ಮತ್ತು ಇಟಲಿಯ ಸುಮಾರು ೫೦ ಕಂಪನಿಗಳೊಂದಿಗೆ ಕೈಗಾರಿಕಾ ದುಂಡು ಮೇಜಿನ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದಾರೆ.

*******

ಬಾಂಗ್ಲಾದೇಶದಲ್ಲಿ, ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಅವರ ಇಬ್ಬರು ಆಪ್ತ ಸಹಾಯಕರಿಗೆ ಸಂಬಂಧಿಸಿದಂತೆ ಮಾನವೀಯತೆ ವಿರುದ್ಧದ ಅಪರಾಧ ಪ್ರಕರಣದಲ್ಲಿ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಇಂದು ತನ್ನ ತೀರ್ಪನ್ನು ಪ್ರಕಟಿಸಲಿದೆ.

*******

ಗೋವಾದ ಪಣಜಿಯಲ್ಲಿ ನಿನ್ನೆ ನಡೆದ ಫಿಡೆ ಚೆಸ್ ವಿಶ್ವಕಪ್‌ನ ಐದನೇ ಸುತ್ತಿನ ಟೈ-ಬ್ರೇಕ್ ಆಟಗಳಲ್ಲಿ ಪಿ.ಹರಿಕೃಷ್ಣ ಮೆಕ್ಸಿಕೋದ ಜೋಸ್ ಮಾರ್ಟಿನೆಜ್ ಅಲ್ಕಾಂಟರಾ ವಿರುದ್ಧ ಸೋತ ನಂತರ, ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಕ್ವಾರ್ಟರ್ ಫೈನಲ್‌ನಲ್ಲಿ ಏಕೈಕ ಭಾರತೀಯ ಆಟಗಾರನಾಗಿ ಉಳಿದಿದ್ದಾರೆ. ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ೧೬ನೇ ಸುತ್ತಿನ ಎರಡನೇ ಪಂದ್ಯದಲ್ಲಿ ಅಮೆರಿಕದ ಲೆವೊನ್ ಅರೋನಿಯನ್ ಅವರನ್ನು ಸೋಲಿಸುವ ಮೂಲಕ ಫಿಡೆ ವಿಶ್ವಕಪ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಇಂದು ನಡೆಯುವ ಕ್ವಾರ್ಟರ್ ಫೈನಲ್‌ನಲ್ಲಿ, ಎರಿಗೈಸಿ ಚೀನಾದ ಗ್ರ್ಯಾಂಡ್ ಮಾಸ್ಟರ್ ವೀ ಯಿ ಅವರನ್ನು ಎದುರಿಸಲಿದ್ದಾರೆ.

****END***